**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ. 1031/2022**

**ದಿನಾಂಕಃ 02.04.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಮಾಲತೇಶ | ಚಾಸಾ-1, ಪ್ರಾಸ.-1 |
| ತಂದೆಯ ಹೆಸರು ಃ | ಬಸಪ್ಪ | |
| ವಯಸ್ಸು ಃ | 27 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಬಿಳುವಾಲ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಆರೋಪಿತ ಗೊತ್ತು. ಕಳೆದ 2 ವರ್ಷದ ಹಿಂದೆ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ನಾನು ಬಿಳುವಾಲ ಗ್ರಾಮದಲ್ಲಿ ಇದ್ದೆ ಆಗ ಚಾಸಾ-6 ಮತ್ತು 7 ಕರೆ ಮಾಡಿ ನಿನ್ನ ದೊಡ್ಡಪ್ಪ ರವರು ಕಡೂರಿನಿಂದ ತಂಗ್ಲಿಗೆ ಹೋಗಲೆಂದು ಕೆಎ-66 ಹೆಚ್-8311 ಟಿ ವಿ ಎಸ್ ಬೈಕಿನಲ್ಲಿ ತಂಗ್ಲಿ ಬಳಿ ಹೋಗುತ್ತಿದ್ದಾಗ ಹಿಂಬದಿಯಿಂದ ಅತೀವೇಗವಾಗಿ ಬಂದ ಕೆ ಎಸ್ ಆರ್ ಟಿ ಸಿ ಬಸ್ ಅಜಾಗರೂಕತೆಯಿಂದ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಅವರು ನೆಲದ ಮೇಲೆ ಬಿದ್ದು ಅವರ ತಲೆ ಮತ್ತು ಎದೆಗೆ ತೀವ್ರ ಪೆಟ್ಟಾಗಿ ತಲೆಯಿಂದ ರಕ್ತ ಬರುತ್ತಿದೆ ಎಂದು ತಿಳಿಸಿದ ಮೇರೆಗೆ ನಾನು ತಕ್ಷಣ ಊರಿನಿಂದ ಹೊರಟು ಘಟನಾ ಸ್ಥಳಕ್ಕೆ ಬಂದು ನನ್ನ ದೊಡ್ಡಪ್ಪ ರವರನ್ನು ಅಲ್ಲೇ ಇದ್ದ ಆಟೋದ ಸಹಾಯದಿಂದ ಕಡೂರಿನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯದಲ್ಲಿ ತರೀಕೆರೆ ಬಳಿ ತೀರಿಕೊಂಡಿರುತ್ತಾರೆ. ನಂತರ ವಾಪಸ್ಸು ಕಡೂರಿನ ಸರ್ಕಾರಿ ಆಸ್ಪತ್ರೆಗೆ ತಂದು ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ**

ದಿಃ 20.09.2021 ರಂದು ಘಟನೆ ಜರುಗಿತು ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ಸಂ ಕೆಎ-35 ಎಫ್-416 ಎಂದರೆ ಸರಿ.

**ಪಾಟೀಸವಾಲುಃ ಶ್ರೀ ಎನ್ ಎಸ್ ಆರೋಪಿ ಪರ ವಕೀಲರಿಂದಃ**

ನಾನು 8 ನೇ ತರಗತಿವರೆಗೆ ವಿದ್ಯಾ,ಬ್ಯಾಸ ಮಾಡಿರುತ್ತೇನೆ. ನಿಪಿ-1 ನ್ನು ನನ್ನ ಹೇಳಿಕೆ ಮೇರೆಗೆ

ಬೇರೆಯವರು ಬರೆದಿರುತ್ತಾರೆ. ಕಡೂರಿನಿಂದ ಬಾಣಾವರ ಕಡೆಗೆ ಹೋಗುವ ಟಾರ್ ರಸ್ತೆಯ ತುದಿಯಲ್ಲಿ ಬಿದ್ದಿದ್ದರು. ನನ್ನ ದೊಡ್ಡಪ್ಪನಿಗೆ ವಾಹನ ಚಾಲನಾ ಪರವಾನಗಿ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಬೈಕಿಗೆ ವಿಮೆ ಇರಲಿಲ್ಲ ಎಂದರೆ ಸಾಕ್ಷಿಯು ವಿಮೆ ಇತ್ತು ಎಂದು ನುಡಿಯುತ್ತಾರೆ. ನನ್ನ ವಾಹನದ ವಿಮಾ ಪಾಲಿಸಿ ದಿಃ 19.11.2019 ಕ್ಕೆ ಮುಕ್ತಾಯವಾಗಿತ್ತು ಎಂದರೆ ಸರಿಯಲ್ಲ. ಅಪಘಾತವು ರಸ್ತೆಯ ಎಡಭಾಗದಲ್ಲಿ ಆಗಿರುತ್ತದೆ. ನಿಪಿ-1 ರ ದೂರಿನಲ್ಲಿ ಬರೆದಿರುವ ವಿಷಯ ಸರಿ ಇರುತ್ತದೆ. ನಿಪಿ-1 ರಲ್ಲಿ ನಾನು ನೇರವಾಗಿ ಆಸ್ಪತ್ರೆಗೆ ಹೋಗಿ ನನ್ನ ದೊಡ್ಡಪ್ಪನನ್ನು ಹೋಗಿ ನೋಡಿದೆ ಎಂದು ನಮೂದು ಇದೆ ಎಂದರೆ ಸರಿ. ಸದರಿ ಭಾಗವನ್ನು ಸಾಕ್ಷಿಗೆ ತೋರಿಸಲಾಗಿರುತ್ತದೆ. ಚಾಸಾ-6 ಮತ್ತು 7 ನನಗೆ ವಿಷಯವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ವಾಹನ ಚಾಲನಾ ಪರವಾನಗಿ ಇಲ್ಲದೇ ಅಜಾಗರೂಕತೆಯಿಂದ ಬೈಕನ್ನು ರಸ್ತೆಗೆ ತಂದು, ರಸ್ತೆಯಲ್ಲಿ ಓಡಿಸಲಾಗದೇ, ನಿಯಂತ್ರಣ ಕಳೆದುಕೊಂಡು ರಸ್ತೆಯಿಂದ ಮಣ್ಣಿನ ರಸ್ತೆಗೆ ತಿರುವು ಪಡೆಯುವಾಗ ಬೈಕಿಂದ ಜಾರಿ ಬಿದ್ದರು ಎಂದರೆ ಸರಿಯಲ್ಲ. ಅಪಘಾತವು ಕಡೂರಿನಿಂದ ಬಾಣಾವರಕ್ಕೆ ಹೋಗುವ ಎಡಭಾಗದಲ್ಲಿ ಆಗಿರುತ್ತದೆ. ಕೆ ಎಸ್ ಆರ್ ಟಿ ಸಿ ಬಸ್ ಕಡೂರಿನಿಂದ ಬಾಣಾವರಕ್ಕೆ ಹೋಗುತ್ತಿತ್ತು. ನನ್ನ ದೊಡ್ಡಪ್ಪನಿಗೆ ವಾಹನ ಚಾಲನೆ ಮಾಡಲು ಬಾರದೇ ರಸ್ತೆಯಲ್ಲಿ ಬಿದ್ದು ಅಪಘಾತ ಮಾಡಿಕೊಂಡಿದ್ದಕ್ಕೆ ಪರಿಹಾರಕ್ಕಾಗಿ ನಾನು ಹಿಂದೆ ಬರುತ್ತಿದ್ದ ಬಸ್ ನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ್ದೇವೆ. ಸದರಿ ಪರಿಹಾರದ ಅರ್ಜಿಯಲ್ಲಿ ನನಗೆ ನೋಟಿಸು ಬಂದಿರುವುದಿಲ್ಲ. ಬಸ್ ನ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.